# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

## ಸಿ.ಸಿ. ನಂ. 4551/2022

## ಸಾಕ್ಷಿಗೆ ದಿನಾಂಕ 23.02.2026 ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ್ | ಪಿ.ಡಬ್ಲ್ಯೂ–3 |
| ತಂದೆಯ/ಗಂಡನ ಹೆಸರು | : | ಕೇಸವಶೆಟ್ಟಿ | ಸಿ.ಡಬ್ಲ್ಯೂ– 4 |
| ವಯಸ್ಸು | : | 58 | |
| ಉದ್ಯೋಗ | : | ಎ ಎಸ್ ಐ ಬೈಲಕುಪ್ಪ ಪೋಲೀಸ್ ಠಾಣೆ | |
| ವಾಸಸ್ಥಳ | : | ಹುಣಸೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 2011 ರಿಂದ 2022 ರ ವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.11.2021 ರಂದು ನಾನು ಠಾಣೆಯಲ್ಲಿರುವಾಗ ಚಾಸಾ 1 ರವರು ನನಗೆ ಕರೆ ಮಾಡಿ ಹೆಚ್ ಡಿ ಕೋಟೆ ಟೌನ್ ಇಂದಿರಾ ಕ್ಯಾಂಟೀನ್ ಹಿಂಭಾಗ ಮಧ್ಯ ಮಾರಾಟ ಮಾಡುತ್ತಿರುತ್ತಾರೆ ಎಂಬ ಬಗ್ಗೆ ನನಗೂ ಹಾಗೂ ನಮ್ಮ ಠಾಣೆಯಲ್ಲಿ ಪ್ರೊಬೆಷನರಿ ಪಿ ಎಸ್ ಐ ಆಗಿ ಕೆಲಸ ಮಾಡುತ್ತಿದ್ದಂತಹ ಚಾಸಾ 6 ರವರಿಗೆ ತಿಳಿಸಿದ್ದು ನಂತರ ನಾನು ಮತ್ತು ಚಾಸಾ 5 ಮತ್ತು 6 ರವರು ಇಲಾಖಾ ಜೀಪಿನಲ್ಲಿ ಚಾಸಾ 1 ರವರ ಜೊತೆ ಹೆಚ್ ಡಿ ಕೋಟೆ ಟೌನ್ ಇಂದಿರಾ ಕ್ಯಾಂಟೀನ್ ಹಿಂಭಾಗ ಮರೆಯಲ್ಲಿ

ನಿಲ್ಲಿಸಿ ನಾವುಗಳು ಹೋಗಿ ನೋಡಲಾಗಿ ಅಪರಿಚಿತ ಆಸಾಮಿಯೊಬ್ಬರು ಮಧ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು ನಂತರ ನಮ್ಮ ಚಾಸಾ 6 ರವರು ಹೋಗಿ ಅವನನ್ನು ಹಿಡಿದುಕೊಂಡಿರುತ್ತಾರೆ ನಂತರ ಆತನ ಜೊತೆಯಲ್ಲಿ ಇದ್ದ ಇನ್ನೊಬ್ಬ ಆಸಾಮಿಯನ್ನು ನಾನು ಮತ್ತು ಚಾಸಾ 5 ರವರು ಹಿಡಿದುಕೊಂಡಿರುತ್ತೇವೆ. ನಂತರ ಅವರ ಬಳಿ ಇದ್ದ ಬ್ಯಾಗನ್ನು ಪರಿಶೀಲಿಸಲಾಗಿ 1 ನೇ ಆರೋಪಿಯವರ ಬ್ಯಾಗಿನಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಯ 28 ಪ್ಯಾಕೇಟುಗಳು ಇರುವುದಕು ಕಂಡುಬಂದಿರುತ್ತದೆ. ಇನ್ನೊಬ್ಬ ಅಸಾಮಿಯ ಬಳಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಯ 27 ಪ್ಯಾಕೇಟುಗಳು ಕಂಡುಬಂದಿರುತ್ತವೆ ಅದೂವಲ್ಲದೆ ಅವರ ಬಳಿ 15 ಪ್ಲಾಸ್ಟಿಕ್ ಲೋಟಗಳು ಇರುವುದು ಸಹ ಕಂಡುಬಂದಿರುತ್ತದೆ. ನಂತರ ಸ್ಥಳದಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಮಧ್ಯದ ಪೌಚುಗಳನ್ನು ಮತ್ತು ಪ್ಲಾಸ್ಟಿಕ್ ಲೋಟಗಳನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ಕೃತ್ಯ ನಡೆದ ಸ್ಥಳದಲ್ಲಿ ತಯಾರಿಸಿದ ಮಹಜರಿನಲ್ಲಿ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಯು ಮಹಜರಿನಲ್ಲಿದ್ದ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 (ಸಿ) ಎಂದು ಗುರತಿಸಲಾಯಿತು. ಸದರಿ ವಿಚಾರವಾಗಿ ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು 1 ಮತ್ತು 2 ಅನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಅಮಾನತ್ತು ಮಹಜರ್ ಅನ್ನು ಜರುಗಿಸಿ ಆರೋಪಿತರ ಬಳಿ ಇದ್ದಂತಹ ಒಂದು ಪ್ಲಾಸ್ಟಿಕ್ ಬ್ಯಾಗನ್ನು ಸಹ ವಶಕ್ಕೆ ಪಡೆದುಕೊಳ್ಳಲಾಗಿತ್ತು ಎಂದರೆ ಸರಿ.

**ಪಾಟೀ ಸವಾಲು  ಆರೋಪಿ ಪರ ವಕೀಲರಿಂದಃ**

1. ದಾಳಿಯಲ್ಲಿ ಭಾಗವಹಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು ಮುಂದುವರಿದು ನಮ್ಮ ಹಿರಿಯ ಅಧಿಕಾರಿರವರು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮೇಲೀನ ಅಧಿಕಾರಿಯವರು ಸುಮಾರು ಬೆಳಿಗ್ಗೆ 8.45 ಗಂಟೆಗೆ ಕರೆ ಮಾಡಿ ತಿಳಿಸಿರುತ್ತಾರೆ. ಫೋನ್ ಕರೆ ಮಾಡಿ ವಿಷಯವನ್ನು ತಿಳಿಸಿರುತ್ತಾರೆ ಎಷ್ಟು ನಿಮಿಷ ಮಾತನಾಡಿರುತ್ತಾರೆ ಎಂದು ಈಗ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳಕ್ಕೂ ಮತ್ತು ಠಾಣೆಗೂ ಎಷ್ಟು ಕಿ. ಮೀ ಇರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳವು ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸರಿ. ಕೃತ್ಯ ನಡೆದ ಸ್ಥಳದ ಮುಂದೆ ಸಾರ್ವಜನಿಕ ಬಸ್ ನಿಲ್ದಾಣ ಇರುತ್ತದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳವು ಕೊಡಗಿನಿಂದ ಬರುವಂತಹ, ಹುಣಸೂರಿನಿಂದ ಬರುವಂತಹ ಮತ್ತು ಮೈಸೂರಿನಿಂದ ಬರುವಂತಹ ಬಸ್ಸುಗಳ ಸ್ಥಳವಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಬಸ್ಸುಗಳು ಓಡಾಡುವುದರಿಂದ ಯಾವಾಗಲು ಜನಸಂದಣಿ ಇರುತ್ತದೆ ಎಂದರೆ ಸರಿ. ಸದರಿ ಇಂದಿರಾ ಕ್ಯಾಂಟೀನ್ ಗೆ ಜನರು ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹೋಟೇಲ್ ವೃದ್ದರು, ಶಾಲ ಮಕ್ಕಳು ಬರುತ್ತಾರೆ ಎಂದರೆ ಸರಿ. ಮಹಜರ್ ಮಾಡುವ ಸ್ಥಳದ ಸಮಯದಲ್ಲಿ ಪೋಟೋವನ್ನಾಗಲೀ ಅಥವಾ ವೀಡೀಯೋನ್ನಾಗಲೀ ತೆಗೆದಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

2. ಮಹಜರಿನಲ್ಲಿ ಚಾಸಾ 2 ಮತ್ತು 3 ರವರನ್ನು ಸಾಕ್ಷಿದಾರರನ್ನಾಗಿ ತೋರಿಸಿದ್ದು ಅವರನ್ನು ಹೊರತು ಪಡಿಸಿ ಸ್ಥಳಿಯನ್ನು ಪಂಚರುಗಳನ್ನಾಗಿ ಮಾಡಲು ನಿಮಗೆ ಏನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಎಂದು

ನುಡಿಯುತ್ತಾರೆ. ಅಮಾನತ್ತು ಮಹಜರನ್ನು ಚಾಸಾ 5 ರವರು ತಯಾರು ಮಾಡಿರುತ್ತಾರೆ. ಸದರಿ ಮಹಜರನ್ನು ಸುಮಾರು 9.15 ರಿಂದ 10.15 ರವರೆಗೆ ಮಹಜರನ್ನು ಜರುಗಿಸಲಾಗಿರುತ್ತದೆ. ಮುದ್ದೆ ಮಾಲು 1 ಮಧ್ಯದ ಪೌಚುಗಳಿಗೆ ಪ್ರತ್ಯೇಕವಾಗಿ ಬ್ಯಾಚ್ ನಂಬರನ್ನು ನೀಡಲಾಗಿರುತ್ತದೆ ಎಂದರೆ ಸರಿ. ಮಹಜರಿನಲ್ಲಿ ಬ್ಯಾಚ್ ನಂಬರನ್ನು ನಮೂದು ಮಾಡಲು ಯಾವುದಾದರು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮ್ಮ ತನಿಖಾಧಿಕಾರಿಯವರು ಮಾಡಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ರಂತಹ ಪೌಚುಗಳನ್ನು ಎಲ್ಲ ಮಧ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ.

3. ಮುದ್ದೆ ಮಾಲು 1 ರಂತಹ ಪೌಚುಗಳನ್ನು ನಮ್ಮ ಠಾಣೆಯಲ್ಲಿ ಬೇರೆ ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾಗಿರುತ್ತದೆ ಎಂದರೆ ನಮ್ಮ ತನಿಖಾಧಿಕಾರಿಯವರನ್ನು ಕೇಳಬೇಕು ಎಂದು ನುಡಿಯುತ್ತಾರೆ. ಆರೋಪಿತರನ್ನು ಈದಿನವೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿರಿಗೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲೀನ ಅಧಿಕಾರಿಗಳಿಗೆ ಸಹಾಯ ಮಾಡಲು ಮತ್ತು ನಮ್ಮ ಠಾಣೆಯ ಅಂಕಿ ಅಂಶಗಳನ್ನು ತೋರಿಸುವ ಸಲುವಾಗಿ ಸುಳ್ಳು ದೋಷಾ ರೋಪಣಾ ಪಟ್ಟಿಯನ್ನು ಸಲ್ಲಿಸಿ ರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಮತ್ತು 2 ರಂತಹ ವಸ್ತುಗಳು ಎಲ್ಲಾ ಕಡೆಯಲ್ಲು ಸಿಗುತ್ತವೆ ಎಂದರೆ ಸರಿ. ಆರೋಪಿತರು ವಯೋವೃದ್ದಾಗಿದ್ದರಿಂದ ಇಂದಿರಾ

ಕ್ಯಾಂಟೀನ್‌ಗೆ ತಿಂಡಿ ಮಾಡುತ್ತಿದ್ದವನ್ನು ಈ ಪ್ರಕರಣಕ್ಕೆ ತಂದು ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ